

ಮಗಳ ಜೊತೆ ಸೇರಿಕೊಂಡು ಅವ ಎಷ್ಟೇ ಪ್ರಯತ್ನ ಪಟ್ಟು ಆ ಬೆಕ್ಕನ್ನು ನೋಡಿಕೊಂಡರೂ ಅದು ಸಮಯ ಬಂದಾಗ ಪಕ್ಕದ ಮನೆಗಳಿಗೆ ನುಗ್ಗಲು ಪ್ರಯತ್ನ ಮಾಡುತ್ತಿತ್ತು. ಅವ ಆಫೀಸಿಗೆ, ಮಕ್ಕಳು ಕಾಲೇಜಿಗೆ ಹೋದ ಕೂಡ್ಲೆ ತಾನೂ ಹೊರಗೆ ಹೋಗ್ತೇನೆ ಅಂತ ಹಟ ಮಾಡ್ತಿತ್ತು. ಸ್ಮಿತಾಳಿಗೆ ಅದು ಕಿರಿಕಿರಿಯಾಗಿ ಹೊರಗೆ ಹಾಕಿ ಬಾಗಿಲು ಹಾಕಿ ಬಿಡುತ್ತಿದ್ದಳು. ಹಗಲಿಡೀ ಬರದೇ ಇದ್ದ ಆ ಪ್ರಾಣಿ ಸಂಜೆ ಅವ ಬಂದಾಗ ಜೊತೆಗೇ ಒಳಗೆ ಬಂದು ಬಿಡುತ್ತಿತ್ತು.

ಆ ಫ್ಲ್ಯಾಟಿಗೆ ಬಂದ ಹೊಸದ್ರಲ್ಲಿ ಯಾರನ್ನಾದ್ರೂ ಪರಿಚಯ ಮಾಡಿಕೊಳ್ಳಬೇಕು ಅಂತ ಅವ ಹಾತೊರೀತಾ ಇದ್ದ. ಒಂದು ದಿನ ವಾಕಿಂಗಿಗೆ ಹೋಗುವಾಗ, 'ಹಲೋ ಯಂಗ್ ಜಂಟಲ್‌ಮ್ಯಾನ್' ಅಂತ ವಯಸ್ಸಾದ ವ್ಯಕ್ತಿ ಒಬ್ಬರು ಮಾತಾಡಿಸಿದ್ದರು, 'ನಾನು ಪರಾಶರನ್ ಅಂತ. ಇದೇ ಅಪಾರ್ಟ್‌ಮೆಂಟಿನ 'ಸಿ' ಬ್ಲಾಕ್‌ನಲ್ಲಿ ಇರೂದು. ಬ್ಯಾಂಕಿನಲ್ಲಿದ್ದು ರಿಟೈರ್ ಆಗಿದ್ದೇನೆ' ಅಂತ ಪರಿಚಯ ಮಾಡಿಕೊಂಡಿದ್ದರು.

ವಿಷ್ಣುಮೂರ್ತಿ ಅವರೊಟ್ಟಿಗೇ ನಿತ್ಯ ವಾಕಿಂಗಿಗೆ ಹೋಗ್ತಾ ಇದ್ದ. ಒಂದು ದಿನ ಅವರ ವೈಯಕ್ತಿಕ